(ಪೇಪರ್ ಅಲಾಟೀಸ್) ಹಂಚಿಕೆದಾರಿಗೆ ವಿವಿಧ ನಿವೇಶನಗಳ ಸಂಖ್ಯೆ ಮತ್ತು ಬಡಾವಣೆಯನ್ನು ಈ ಕೆಳಕಂಡಂತೆ ಸೂಚಿಸುತ್ತದೆ.

ಮಾಹೆ ಮತ್ತು ವರ್ಷ	ನಿವೇಶನ ಸಂಖ್ಯೆ ಸೂಚಿಸಿರುವುದು.
	೧೯೯೧ ಇಲ್ಲ.
ಜುಲೈ	೧೯೯೨ ೧೧೧೩ ನಿವೇಶನಗಳು
	೪೬.೯೪೪ ಅರ್ಜಿದಾರರು
	೨೭.೫೪ ಕೋಟಿ ರೂಪಾಯಿಗಳು.
	-ಇಲ್ಲ-

೧೯೯೩ರ ಸಾಲಿನಲ್ಲಿ ೫೦೦-೧೦೦೦ ಎಕರೆವರೆಗಾದರೂ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಈ ಮಿತಿಯೊಳಗಿನ ಜಮೀನು ಸ್ವಾಧೀನಪಡಿಸಿಕೊಂಡಲ್ಲಿ, ಸುಮಾರು ೫೦೦೦ ನಿವೇಶನಗಳನ್ನು ಎತರಿಸಲು ಈ ವರ್ಷ ಸಾಧ್ಯವಾಗುತ್ತದೆ.

ವಿಷಯ:- ಜನವರಿ ೧೯೯೨ ರಿಂದ ಬಿ.ಟಿ.ಎಸ್. ಬಸ್ಸುಗಳ ಸಂಖ್ಯೆಯಲ್ಲಿ ಹೆಚ್ಚಳ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೦:- (೨೮೨)

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್, ೯೨ರ ಅಂತ್ಯದೊಳಗೆ ಬೆಂಗಳೂರು ನಗರ ಸಾರಿಗೆಯಲ್ಲಿ ಚಾಲನೆಯಲ್ಲಿದ್ದ ವಾಹನಗಳ ಸಂಖ್ಯೆ ಎಷ್ಟು?

ಆ) ಜನವರಿ, ೯೨ ರಿಂದ ಡಿಸೆಂಬರ್, ೯೨ರ ವರೆಗೆ ಬೆಂಗಳೂರು ನಗರ ಸಾರಿಗೆಗೆ ಒದಗಿಸಿದ ಹೊಸ ವಾಹನಗಳೆಷ್ಟು?

ಇ) ಈ ವಾಹನಗಳಲ್ಲಿ ಪ್ರತಿನಿತ್ಯ ಪ್ರಯಾಣಿಸುವ ಪ್ರಯಾಣಿಕರ ಸರಾಸರಿ ಸಂಖ್ಯೆ ಎಷ್ಟು?

ಈ) ಬೆಂಗಳೂರು ನಗರಕ್ಕೆ ಬೇಕಾಗಬಹುದಾದ ವಾಹನಗಳ ಅಂದಾಜು ಎಷ್ಟು?

ಉ) ೧೯೯೩-೯೪ನೇ ಸಾರಿಗೆ ಬೆಂಗಳೂರು ನಗರ ಸಾರಿಗೆಗೆ ಎಷ್ಟು ಬಸ್ಸುಗಳನ್ನು ಸೇರಿಸಲು ಯೋಜಿಸಿದೆ?

ಊ) ಲಾಭದಾಯಕವಲ್ಲದ ಮಾರ್ಗಗಳನ್ನು ಖಾಸಗೀಯವರಿಗೆ ಕೊಡಲು ಉದ್ದೇಶಿಸಲಾಗಿದೆಯೇ?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

೧೫೮೦ ವಾಹನಗಳು (ಅನುಸೂಚಿಗಳು)
೧೪೪ ವಾಹನಗಳು (ಅನುಸೂಚಿಗಳು)
ಸುಮಾರು ೧೮.೬೫ ಲಕ್ಷಗಳು.
ಸುಮಾರು ೨೦೦೦ ವಾಹನಗಳು (ಅನುಸೂಚಿಗಳು)
೧೧೧ ವಾಹನಗಳು (ಅನುಸೂಚಿಗಳು)
ಇಲ್ಲ.